**ಸಾಕ್ಷಿಯನ್ನು ದಿಃ 30-10-2021 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜಿ ಬಿ ಎನ್ ವಕೀಲರಿಂದ**

**ಪಾಟೀ ಸವಾಲುಃ ವಾದಿಯಿಂದ**

ದಾವಾ ಸ್ವತ್ತು ಬಾಸೆಲ್ ಮಿಶನ್ ಕಾಂಪೌಂಡ ಒಳಗಡೆ ಇದೆ ಎಂದರೆ ಸರಿ. ಬಾಸೆಲ್ ಮಿಶನ್ ಕಾಂಪೌಂಡ ಒಳಗಡೆ ಇರುವ ಎಲ್ಲಾ ಸ್ವತ್ತುಗಳು ವಾದಿ ನಂ. 1 ರ ಟ್ರಸ್ಟನ ಸ್ವತ್ತುಗಳು ಎಂದರೆ ಸರಿ. ಸದರಿ ಬಾಸೆಲ್ ಮಿಶನ್ ಕಾಂಪೌಂಡ ಒಳಗಡೆ ಇರುವ ವ್ಯಕ್ತಿಗಳು ಅವರು ವಾಸಮಾಡುವ ಮನೆಗಳಿಗೆ ಯಾರೂ ಸಹ ಮಾಲೀಕರಲ್ಲ ಎಂದರೆ ಸರಿ. ಸದರಿ ಕಾಂಪೌಂಡಿನ ಒಳಗಡೆ ಇರುವ ಮನೆಗಳಲ್ಲಿ ವಾಸಮಾಡುವವರು ಎಲ್ಲರೂ ಮನೆ ಬಾಡಿಗೇ ಮತ್ತು ಭೂ ಬಾಡಿಗೆದಾರರು ಎಂದರೆ ಸರಿ. ಸದರಿ ಮನೆಗಳಲ್ಲಿ ಸುಮಾರು 100 ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಮನೆಗಳಲ್ಲಿ ವಾಸಮಾಡುವ ಜನರು ಬಾಸೆಲ್ ಮಿಶನ್ ಟ್ರಸ್ಟನ ಅನುಮತಿ ಮೆರೆಗೆ ವಾಸವಾಗಿದ್ದಾರೆ ಎಂದರೆ ಸರಿ.

ನಾನು ಸದರಿ ದಾವಾ 1 ನೇ ವಾದಿಯ ಟ್ರಸ್ಟನ ಆಸ್ತಿಯಲ್ಲಿ ಸುಮಾರು 50 ವರ್ಷಗಳಿಂದ ವಾಸವಾಗಿದ್ದೇನೆ. ನಾನು ವಾಸಮಾಡುವ ಮನೆಯ ಸಿಟಿ ಸರ್ವೇ ನಂ. 4069/24 ಆಗಿರುತ್ತದೆ. ಸದರಿ ಮನೆಯಲ್ಲಿ ನಾನು ನನ್ನ ತಂದೆಯ ಕಾಲದಿಂದಲೂ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ತಂದೆ ಸಹ 1 ನೇ ವಾದಿಯ ಅನುಮತಿ ಮೆರೆಗೆ ವಾಸವಾಗಿದ್ದರು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಇಂದಿಗೂ ಸಹ ನಾನು ಸ್ವಾಧೀನದಲ್ಲಿದ್ದೇನೆ ಹಾಗೂ ನನ್ನ ಸಹೋದರಿಯರು ಸ್ವಾಧೀನದಲ್ಲಿದ್ದಾರೆ.

ನಾನು ನನ್ನ ಮನೆಯಲ್ಲಿ ವಿಜಯ ಕರ್ನಾಟಕ, ವಿಜಯವಾಣಿ ಹಾಗೂ ನವೋದಯ ಪತ್ರಿಕೆ ತರಿಸುತ್ತೇನೆ. ಸದರಿ ಪತ್ರಿಕೆಗಳನ್ನು ನಾನು ಓದುತ್ತೇನೆ. ನಾನು ಈಗ ನೋಡುತ್ತಿರುವ ದಿನಪತ್ರಿಕೆ ದಿಃ 28-01-2021 ರ ನವೋದಯ ಪತ್ರಿಕೆ ಎಂದರೆ ಸರಿ. ಸದರಿ ಪತ್ರಿಕೆಯಲ್ಲಿ ಜಾಹಿರ ಪ್ರಕಟಣೆ ಓ ಎಸ್ ನಂ. 2/2021 ರಲ್ಲಿ ದಾವೆ ಚಾಲ್ತಿಯಲ್ಲಿ ಇದೆ ಎಂದು ಪ್ರಕಟಣೆ

ಹೊರಡಿಸಿದ್ದಾರೆ ಎಂದರೆ ಸರಿ.  ಸದರಿ ಪತ್ರಿಕೆಯನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ನಿಪಿ-23 ಎಂದು ಗುರುತಿಸಲಾಯಿತು.

ದಾವಾ ಸ್ವತ್ತನ್ನು ನಾನು ಪ್ರತಿವಾದಿ 6 ರವರಿಂದ ಹಕ್ಕು ಬಿಟ್ಟ ಪತ್ರದ ಮೂಲಕ ಪಡೆದಿದ್ದೇನೆ.  ದಾವಾ ಸ್ವತ್ತಿನಲ್ಲಿ 6 ನೇ ಪ್ರತಿವಾದಿಯ ತಾಯಿ ಮತ್ತು ಅವರ ಕುಟುಂಬದವರು ವಾಸವಾಗಿದ್ದರು ಎಂದರೆ ಸರಿ. ಸದರಿಯವರು ಸಹ 1 ನೇ ವಾದಿಯ ಟ್ರಸ್ಟನ ಅನುಮತಿ ಮೆರೆಗೆ ವಾಸವಾಗಿದ್ದರು ಎಂದರೆ ಸರಿ.

ನಾನು ನಿವೃತ್ತ ಪ್ರಾಂಶುಪಾಲರು. ನಾನು ಯಾವುದೇ ಸ್ವತ್ತನ್ನು ಹಣ ಕೊಟ್ಟು ಖರೀದಿಸಬೇಕಾದರೆ ಸದರಿ ಸ್ವತ್ತಿನ ದಾಖಲೆಗಳನ್ನು ಹಾಗೂ ಮಾಲೀಕತ್ವವನ್ನು ಪರಿಶಿಲಿಸುತ್ತೇನೆ ಎಂದರೆ ಸರಿ.  ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಬಾಸೆಲ್ ಮಿಶನ್ ಟ್ರಸ್ಟನವರನ್ನು ವಿಚಾರಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಯಾವುದೇ ಟ್ರಸ್ಟ ಹಾಗೂ ಸಮಿತಿ ಅಸ್ಥಿತ್ವದಲ್ಲಿ ಇಲ್ಲ ಎಂದು ನುಡಿಯತ್ತಾರೆ.

ದಾವಾ ಸ್ವತ್ತಿನ ಸಿಟಿಎಸ್ ನಂ. 4069/42 ಎಂದರೆ ಸರಿ.  ಸದರಿ ಸ್ವತ್ತಿನ ವಿಸ್ತೀರ್ಣ 50 ಚ.ಯಾರ್ಡ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ವಿಸ್ತೀರ್ಣ 450 ಚ.ಯಾರ್ಡ ಇದೆ ಎಂದರೆ ಸರಿ. 6 ನೇ ಪ್ರತಿವಾದಿ ನನಗೆ ತಾವು ಸ್ವಾಧೀನದಲ್ಲಿದ್ದ ಅಷ್ಟು ಅಳತೆಯ ಸ್ವತ್ತನ್ನು ನನಗೆ  ನೀಡಿದ್ದಾರೆ.

6 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಬಾಡಿಗೆದಾರರು ಆಗಿದ್ದರು ಎಂದರೆ ಸರಿ.  ದಾವಾ ಸ್ವತ್ತನ್ನು 6 ನೇ ಪ್ರತಿವಾದಿಯು ನನಗೇ ಬಿಟ್ಟು ಕೊಡಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೂ ಸಹ ಹಕ್ಕು ಬಿಟ್ಟ ಪತ್ರ ಪಡೆಯುದುಕೊಳ್ಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ನನಗೆ 3,50,000/- ರೂಪಾಯಗೆ ಹಕ್ಕು ಬಿಟ್ಟ ಪತ್ರ ಬರೆದುಕೊಟಿಲ್ಲ ಮತ್ತು ಸದರಿ ಹಕ್ಕು ಬಿಟ್ಟ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾವಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಲ್ಲದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ

ಅನುಕೂಲವಾಗಲು ಸದರಿ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಬಾಸೇಲ್ ಮಿಶನ್ ಕಾಂಪೌಂಡನಲ್ಲಿ ವಾಸವಾಗಿದರು ಕ್ರಿಚ್ಚನ ಸಮೂದಾಯಂವರು ಎಂದರೆ ಸರಿ. ಸದರಿ ಕಾಂಪೌಂಡನಲ್ಲಿ ಚರ್ಚ ಆಫ್ ಸೌತ್ ಇಂಡಿಯಾ ಮತ್ತು ಬಾಸೆಲ್ ಮಿಶನ್ ಎಂದು 2 ಪಂಗಡಗಳು ಇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚರ್ಚ ಆಫ್ ಸೌತ್ ಇಂಡಿಯಾ ಮಾತ್ರ ಇದೆ ಎಂದು ನುಡಿಯುತ್ತಾರೆ. ನಾನು ಚರ್ಚ ಆಫ್ ಸೌತ್ ಇಂಡಿಯಾದ ಸದಸ್ಯ ಎಂದರೆ ಸರಿ. ಚರ್ಚ ಆಫ್ ಸೌತ್ ಇಂಡಿಯಾದವರಿಗೆ ಬಾಸೆಲ ಮಿಶನ್ ಟ್ರಸ್ಟನ ಆಸ್ತಿಗಳ ಸ್ವತ್ತುಗಳಲ್ಲಿ ಇರಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ ಟ್ರಸ್ಟನ ಆಸ್ತಿಗಳಲ್ಲಿ ಇರುವವರು ಬಾಸೆಲ್ ಮಿಶನ್ ಟ್ರಸ್ಟನ ಫಲಾನುಭವಿಗಳು ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಕ್ಕದಲ್ಲಿ ಬಾಸೆಲ್ ಮಿಶನ್ ಚರ್ಚನ್ನು ಕಟ್ಟುವ ಸಲುವಾಗಿ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಚರ್ಚ ಭಾಗಶಃ ಕಟ್ಟಲಾಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ವಾದಿಯ ಟ್ರಸ್ಟನವರು ದಾವೆ ಸಲ್ಲಿಸಿದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯ ಸತ್ಯಾಂಶವನ್ನು ಮರೆಮಾಚಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಹಿಂದೆ ತಗಡಿನ ಮನೆ ಆಗಿತ್ತು ಎಂದರೆ ಸರಿ. ಸದರಿ ಮನೆ ಸುಮಾರು ನೂರಾರು ವರ್ಷಗಳ ಹಳೆ ಮನೆ ಎಂದರೆ ಸರಿ. ಸದರಿ ಮನೆಯ ಸುತ್ತಲೂ ಕಲ್ಲು ಮತ್ತು ಮಣ್ಣಿನ ಗೋಡೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಲ್ಲು ಮತ್ತು ಮಣ್ಣಿನ ಗೋಡೆಯನ್ನು ನಾನು ತೆಗೆದಿದ್ದೇನೆ. ಸದರಿ ದಾವಾ ಆಸ್ತಿಯಲ್ಲಿ ಹಳೆ ಗೊಡೆಯನ್ನು ತೆಗೆದು ಹೊಸ ಮನೆ ಕಟ್ಟಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ಹೊಸ ಮನೆ ಕಟ್ಟದಿದ್ದರು ಸಹ ನಗರ ಸಭೆಗೆ ಯಾವುದೇ ದಾಖಲೆ ಹಾಜರುಪಡಿಸದಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಗರ ಸಭಗೆ ಯಾವುದೇ ಅರ್ಜಿ ನೀಡಿಲ್ಲ ಹಾಗೂ ನಗರ ಸಭೆಯವರು ನನಗೆ ಯಾವುದೇ ಅನುಮತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ನಗರ ಸಭೆಯವರು ನನಗೆ ರೂ. 9,00,000/- ದಂಡ ತುಂಬಬೇಕೆಂದು ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ. ನಾನು 2020-21 ರ ವರೆಗೆ ನಗರ ಸಭೆಗೆ ಕಂದಾಯ ಪಾವತಿಸಿದ್ದೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. 6 ನೇ ಪ್ರತಿವಾದಿ ಇದ್ದ ಹಳೆಯ ಮನೆಯ ಕಂದಾಯವನ್ನು ಪಾವತಿಸಿದ್ದೇನೆ. ನಾನು ಲೀಲಾ ಭೊವೇರವರು ಹೆಸರಿನಲ್ಲಿ ಪಾವತಿಸಿದ್ದೇನೆ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಕಂದಾಯ ಪಾವತಿಸಲು 6 ನೇ ಪ್ರತಿವಾದಿಯ ಅನುಮತಿ ಪಡೆದಿದ್ದೇನೆ.

ದಾವಾ ಸ್ವತ್ತನ್ನು ನೋಡಿಕೊಳ್ಳಲು ಮ್ಯಾನೆಂಜಿಂಗ್ ಟ್ರಸ್ಟಿ ಹಾಗೂ ಟ್ರಸ್ಟಿಗಳು ಹಾಗೂ ಸಮಿತಿ ಅಸ್ಥಿತ್ವದಲ್ಲಿ ಇದೆ ಎಂದರೆ ಸರಿಯಲ್ಲ. ಬಾಸೇಲ್ ಮಿಶನ್ ಆಸ್ತಿಯನ್ನು ಎತ್ತಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**